ಓ.ಎಸ್. ನಂ. 60/2018 ಡಿ.ಡಬ್ಲ್ಯೂ- 2

**ಸಾಕ್ಷಿಯನ್ನು ದಿನಾಂಕ 11.6.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಕೆ ವಕೀಲರಿಂದಃ**

ನಿಡಿ12 ದಾಖಲೆಯು ಪ್ರತಿವಾದಿ-3 ರವರ ಬಳಿ ಇದುದ್ದನ್ನು ನನಗೆ ನೀಡಿರುತ್ತಾರೆ. ಈ ಹಿಂದೆ ನಾನು ಸಾಕ್ಷಿ ವಿಚಾರಣೆ ಮಾಡಿಸುವಾಗ ಸದರಿ ದಾಖಲೆಯನ್ನು ನ್ಯಾಯಾಲಯದಲ್ಲಿ ಗುರುತಿಸಿಕೊಳ್ಳಲು ನನಗೆ ತೊಂದರೆ ಇರಲಿಲ್ಲ. ಪ್ರತಿವಾದಿ-3 ರವರಿಗೆ ನಿಡಿ12 ಕ್ರಯಪತ್ರ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಯು ಮೂಲತಃ ಮೃತ ವಾದಿ ಸಣ್ಣಪ್ಪ ರವರಿಗೆ ದರಕಾಸ್ತು ಮೂಲಕ ಬಂದಿರುತ್ತದೆ ಎಂದರೆ ಸರಿ. ನಿಡಿ12 ರಂತೆ ಮಾರಾಟ ಮಾಡಿರುತ್ತಾರೆ ಎನ್ನಲಾದ ಕ್ರಯಪತ್ರವನ್ನು ಮಾಡುವ ಕಾಲಕ್ಕೆ ಮೃತ ವಾದಿ ಸಣ್ಣಪ್ಪನವರಿಗೆ ಸಾಗುವಳಿ ಪತ್ರದ ನಿಬಂಧನೆಗಳಂತೆ ಮಾರಾಟ ಮಾಡುವ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿರುವುದಿಲ್ಲ ಎನ್ನುವರು. ನಿಡಿ12 ಒಂದು ಸೃಷ್ಟಿತ ದಾಖಲೆಯಾಗಿರುತ್ತದೆ, ಅದರಲ್ಲಿ ಮೃತ ಸಣ್ಣಪ್ಪ ನವರು ಸಹಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿರುವುದಿಲ್ಲ ಎನ್ನುವರು. ದಾವಆಸ್ತಿಯನ್ನು ನಾನು ಪೂರ್ವಾಪರ ವಿಚಾರಿಸದೆ ಖರೀದಿಸಿರುವುದರಿಂದ ನನಗೆ ಯಾವುದೇ ಹಕ್ಕು ಪ್ರಾಪ್ತಿ ಆಗುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಂದೆಗೂ ಸಹ ನಿಡಿ12 ರಂತೆ ದಾವಆಸ್ತಿಯಲ್ಲಿ ಹಕ್ಕು ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿರುವುದಿಲ್ಲ ಎನ್ನುವರು. ನಿಡಿ12 ದಾಖಲಾತಿಯನ್ನು 1 ನೇ ಪ್ರತಿವಾದಿಯೇ ನ್ಯಾಯಾಲಯಕ್ಕೆ ಹಾಜರುಪಡಿಸಬಹುದಿತ್ತು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿರುವುದಿಲ್ಲ, ಅವರನ್ನೇ ಕೇಳಬೇಕು ಎನ್ನುವರು. ನಿಪಿ12 ಸೃಷ್ಟಿತ ದಾಖಲಾತಿ ಆಗಿರುವುದರಿಂದ ಪ್ರತಿವಾದಿ-1 ರವರು ನ್ಯಾಯಾಲಯಕ್ಕೆ ಬಂದರೆ ಸತ್ಯ ಹೊರಗೆ ಬರುತ್ತದೆ ಎಂದು ಅವರು ನ್ಯಾಯಾಲಯಕ್ಕೆ ಬರುತ್ತಿಲ್ಲ ಎಂದರೆ ಸರಿಯಲ್ಲ. ಸದರಿ ಕಾರಣದಿಂದಲೇ 1 ನೇ ಪ್ರತಿವಾದಿಯು ಪ್ರಸ್ತುತ ದಾವೆ ವಿಚಾರಣೆಗೆ ಬಾಕಿ ಇರುವಾಗಲೇ ವಿಲೇವಾರಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎನ್ನುವರು. ಆದ್ದರಿಂದಲೇ ನಾನು ಬೊನಾಫೈಡ್ ಪರ್ಚೆಸರ್ ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ